**ಕ್ರಿಮಿನಲ್ ಪ್ರಕರಣ ಸಂಖ್ಯೆ: 178/2023**

ಪಿಡಬ್ಲ್ಯೂ: 01

ದಿನಾಂಕ : 19.10.2024 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :**

ಈ ಆರೋಪಿತನ ಮೇಲೆ ನಾನು ₂ ಪ್ರಕರಣ ದಾಖಲಿಸಿದ್ದೇನೆ ಅಂದರೆ ಸರಿ. ಈ ಆರೋಪಿತನ ತಂದೆಯ ಮೇಲೆ 2 ಪ್ರಕರಣ ದಾಖಲಿಸಿದ್ದೇನೆ ಅಂದರೆ ಸರಿ. ನಾನು ಬ್ಯಾಡಗಿಯ ಬಸವೇಶ್ವರನಗರದಲ್ಲಿ ವಾಸವಾಗಿದ್ದೇನೆ. ನನ್ನ ಸ್ವಂತ ಊರು ಬ್ಯಾಡಗಿ ಇರುತ್ತದೆ. ನಾನು ಬ್ಯಾಡಗಿಯಲ್ಲಿ ಸ್ವಂತ ಮನೆಯಲ್ಲಿ ವಾಸವಾಗಿದ್ದೇನೆ. ನಾನು ಬಿ ಎ ಎಂ ಎಸ ಮೊದಲನೆಯ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದೇನೆ. ಹೈಸ್ಕೂಲ್ ಶಾಲೆಯನ್ನು ಬ್ಯಾಡಗಿಯಲ್ಲಿ ಕಲಿತಿದ್ದು, ಪಿ.ಯು.ಸಿ ಯನ್ನು ಹಾವೇರಿಯಲ್ಲಿ ಮಾಡಿರುತ್ತೇನೆ. ನನ್ನ ಪ್ರಾಥಮಿಕ ಶಿಕ್ಷಣವನ್ನು 2006 ರಿಂದ 2017 ರವರೆಗೆ ಮುಗಿಸಿರುತ್ತೇನೆ. ಪಿ ಯು ಸಿ ಯನ್ನು 2019 ರಿಂದ 2022 ರವರೆಗೆ ಮುಗಿಸಿರುತ್ತೇನೆ. ನಾನು ಪಿ. ಯು.ಸಿ ಓದುವಾಗ ನಾನು ಹಾಸ್ಟೆಲ್ ನಲ್ಲಿ ಇದ್ದೇನು. ನನ್ನ ತಾಯಿ ಮರಣ ಹೊಂದಿರುತ್ತಾರೆ. ನನ್ನ ತಂದೆ ಮರಣ ಹೊಂದಿ 2 ವರ್ಷ ಆಗಿರುತ್ತದೆ. ನನ್ನ ತಂದೆ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಂದೆ ಜಿ.ಓ.ಡಿ.ಸಿ., ಯಲ್ಲಿ ಶಿಕ್ಷಕರಾಗಿದ್ದರು. ನನ್ನ ತಂದೆಯವರು ರಟ್ಟಿಹಳ್ಳಿ ರಸ್ತೆಯ ಡಿಗ್ರಿ ಕಾಲೇಜನಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ತಂದೆ ಬ್ಯಾಡಗಿ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದರು ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ನನ್ನ ದೂರಿನಲ್ಲಿ ಶಿವಾ ಕಾಲೇಜು ರಾಣೇಬೆನ್ನೂರಿನಲ್ಲಿ ಕೆಲಸ ಮಾಡುತ್ತಿದ್ದರು ಅಂತಾ ಬರೆಸಿದ್ದೆ ಎಂದರೆ ನಿಜ ಆದರೆ ಮೊದಲು ಅಲ್ಲಿ

ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ಕಾಲೇಜಿನಲ್ಲಿ ಕೆಲಸ ಮಾಡುವ ಬಗ್ಗೆ ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲಾ. ರಾಣೇಬೆನ್ನೂರಿನ ಹೊಸಮನಿ ಸಿದ್ದಪ್ಪ ಪದವಿ ಪೂರ್ವ ಕಾಲೇಜಿಗೆ ಶಿವಾ ಕಾಲೇಜ ಎನ್ನುತ್ತಾರೆ ಎಂದರೆ ಸರಿ. ಆರೋಪಿತರು ಸದರಿ ಕಾಲೇಜಿನಲ್ಲಿ ನನ್ನ ತಂದೆ ಯಾವ ಕೆಲಸ ಮಾಡುತ್ತಾರೆ ಅಂತಾ ಮಾಹಿತಿ ಹಕ್ಕಿನಲ್ಲಿ ಕೇಳಿದ್ದು ಅವರು ನನ್ನ ತಂದೆ ಯಾವುದೇ ಕೆಲಸ ಮಾಡಿಲ್ಲಾ ಅಂತಾ ಉತ್ತರ ನೀಡಿಲ್ಲಾ ಅಂದರೆ ಸರಿಯಲ್ಲಾ. ನಮ್ಮ ಕುಟುಂಬಕ್ಕೆ 26 ಗುಂಟೆ ಜಮೀನು ಇರುತ್ತದೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ನಮ್ಮ ತಂದೆಗೆ 11 ಗುಂಟೆ ಜಮೀನು ಇದೆ ಎಂದರೆ ಸಾಕ್ಷಿಯು ಈಗ ಬೇರೆ ಆಗಿದೆ ಎಂದು ನುಡಿಯುತ್ತಾರೆ. ನಮ್ಮ ಕುಟುಂಬಕ್ಕೆ ತೆರೆದಹಳ್ಳಿಯಲ್ಲಿ 1 ಎಕರೆ 4 ಗುಂಟೆ ಜಮೀನು ಇರುತ್ತದೆ. ನನ್ನ ತಂದೆಯವರು ಯಾವುದೇ ಲೇವಾದೇವಿ ವ್ಯವಹಾರ ಮಾಡುತ್ತಿರಲಿಲ್ಲಾ. ನಮ್ಮ ತಂದೆಗೆ ಸಾಕಷ್ಟು ಕೃಷಿ ಜಮೀನು ಇರದೇ ಇರುವುದರಿಂದ ನಮ್ಮ ಕುಟುಂಬಕ್ಕೆ ಸಾಕಷ್ಟು ಆದಾಯ ಇರಲಿಲ್ಲಾ ಅಂದರೆ ಸರಿಯಲ್ಲಾ. ಸಾಕ್ಷಿ ಮುಂದುವರೆದು ನಮ್ಮ ತಾಯಿಯ ಮತ್ತು ನಮ್ಮ ಅಜ್ಜಿಯ ಪೆನ್ಶನ್‌ದಿಂದ ಹಣ ಬರುತ್ತಿತ್ತು. ದೂರಿಗೆ ನಾನೇ ಸಹಿ ಮಾಡಿದ್ದೇನೆ. ನಿಪಿ–01 ರ ಮೇಲೆ ನನ್ನ ಅಕ್ಷರ ಇದೆ ಎಂದರೆ ಸರಿಯಲ್ಲಾ. ನಿಪಿ–01 ರ ಮೇಲೆ ನನ್ನ ಚಿಕ್ಕಪ್ಪ ಪ್ರಕಾಶ ಬರೆದಿರುತ್ತಾರೆ. ನಿಪಿ–01 ರ ಮೇಲೆ ಹಣವನ್ನು ನಮ್ಮ ಚಿಕ್ಕಪ್ಪ ಪ್ರಕಾಶ ಬರೆದಿರುತ್ತಾರೆ. ನಿಪಿ–01 ರ ಮೇಲೆ ನಮ್ಮ ಚಿಕ್ಕಪ್ಪ ಪ್ರಕಾಶ ಬರೆದಿರುತ್ತಾರೆ. 4 ಚಕದಲ್ಲಿಯೂ ಸಹ ಹಣ, ದಿನಾಂಕ ನಮ್ಮ ಚಿಕ್ಕಪ್ಪ ಪ್ರಕಾಶ ಬರೆದಿರುತ್ತಾರೆ. ಆರೋಪಿತರು ಬರೆದ ಚೆಕ್ಕು ಕೊಟ್ಟಿರಲಿಲ್ಲಾ ಅಂದರೆ ಸರಿ. ರಾಮಪ್ಪ ದುರ್ಗಪ್ಪ ಕಂಬಳಿ ಇವರ ಮೇಲೆ ಮಾನ್ಯ ಹಿರಿಯ ನ್ಯಾಯಾಲಯ ಬ್ಯಾಡಗಿಯಲ್ಲಿ ದಾವೆ ದಾಖಲಿಸಿದ್ದೇವೆ ಅಂದರೆ ಸರಿ. ಸದರಿ ಅಸಲು ದಾವಾ ನಂಬರ 343/2023 ಅಂತಾ ಇದೆ ಎಂದರೆ ಸರಿ. ಸದರಿ ದಾವೆಯಲಿ 8 ಲಕ್ಷ ಹಣ

ವಸೂಲಾತಿಗಾಗಿ ದಾವೆ ಸಲ್ಲಿಸಿದ್ದೇವೆ ಅಂದರೆ ಸರಿ. ನನ್ನ ತಂದೆ ಆದಾಯ ತೆರಿಗೆ ಸಲ್ಲಿಸುವ ಬಗ್ಗೆ ನನಗೆ ಗೊತ್ತಿಲ್ಲಾ. ನನ್ನ ತಂದೆಗೆ ಆದಾಯ ಇಲ್ಲದೇ ಇರುವುದರಿಂದ ಆದಾಯ ತೆರಿಗೆ ಸಲ್ಲಿಸಿಲ್ಲಾ ಅಂದರೆ ಸರಿಯಲ್ಲಾ. ನಮ್ಮ ತಂದೆಗೆ ಸಾಕಷ್ಟು ಆದಾಯ ಇಲ್ಲದೇ ಇರುವುದರಿಂದ ಆರೋಪಿತನಿಗೂ ಮತ್ತು ಆರೋಪಿತನ ತಂದೆಗೂ ಹಣ ಕೊಡುವ ಶಕ್ತಿ ಇರಲಿಲ್ಲಾ ಅಂದರೆ ಸರಿಯಲ್ಲಾ. ನಮ್ಮ ತಂದೆ ಎಸ ಬಿ ಐ ಬ್ಯಾಡಗಿಯಲ್ಲಿ ಖಾತೆ ಹೊಂದಿದ್ದರು ಎಂದರೆ ಸರಿ. ದಿನಾಂಕಃ 08.02.2021 ರಂದು ನಮ್ಮ ತಂದೆ ಆರೋಪಿತನ ತಂದೆ ಗೋಣೆಪ್ಪ ಚಿಕ್ಕಣ್ಣನವರ ಇವರಿಗೆ 2 ಲಕ್ಷ 50 ಸಾವಿರ ಹಣ ನೀಡಿದ್ದರು ಅಂದರೆ ಸರಿ. ನನ್ನ ತಂದೆ ಚೆಕ ನಂಬರ 067229 ನೇದ್ದರ ಮುಖಾಂತರ 2 ಲಕ್ಷ 50 ಸಾವಿರ ನೀಡಿದ್ದರು ಅಂದರೆ ಸರಿ. ನನ್ನ ತಂದೆ 2 ಲಕ್ಷ 50 ಸಾವಿರ ರೂಪಾಯಿ ಹಣ ಕೊಟ್ಟ ಭದ್ರತೆಗಾಗಿ ಆರೋಪಿತ ಮತ್ತು ಆತನ ತಂದೆ 4 ಚೆಕ್ಕು ಗಳನ್ನು ಭದ್ರತೆಗಾಗಿ ಕೊಟ್ಟಿದ್ದರು ಅಂದರೆ ಸರಿ. ಸದರಿ 4 ಚೆಕ್ಕುಗಳು ಸಹಿ ಮಾಡಿದ ಖಾಲಿ ಚೆಕ್ಕುಗಳು ಇದ್ದವು ಅಂದರೆ ಸರಿ. ಗೋಣೆಪ್ಪ ಚಿಕ್ಕಣ್ಣನವರ ಇವರು ದಿನಪತ್ರಿಕೆಗಳನ್ನು ಹಾಕುತ್ತಿದ್ದರು. ಈ ಕೇಸಿನ ಆರೋಪಿತನು ಪೊಲೀಸ ಪೇದೆ ಇರುತ್ತಾನೆ. ಆರೋಪಿತನು ಮತ್ತು ಆರೋಪಿತನ ತಂದೆ ಆವಾಗವಾಗ ಹಣ ತೆಗೆದುಕೊಂಡು ಹೋಗುತ್ತಿದ್ದರು. ಆರೋಪಿತನು ಮಾರ್ಚ 2021 ರಂದು 6 ಲಕ್ಷ ಹಣ ತೆಗೆದುಕೊಂಡಿರುತ್ತಾನೆ. ಆರೋಪಿತನು 6 ತಿಂಗಳು ಅಥವಾ ವರ್ಷದ ಒಳಗೆ ಹಣ ಕೊಡುತ್ತೇನೆ ಅಂತಾ ಹೇಳಿದ್ದನು. ನನ್ನ ದೂರಿನಲ್ಲಿ 31.12.2022 ರ ಒಳಗಾಗಿ ಹಣ ಕೊಡಬೇಕು ಅಂತಾ ಕರಾರು ಆಗಿತ್ತು ಅಂತಾ ಬರೆಸಿದ್ದೇನೆ ಅಂದರೆ ಸರಿ. ಸದರಿ ಕರಾರು ಪ್ರಕಾರ 1 ವರ್ಷ 9 ತಿಂಗಳು ಇತ್ತು ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಫೆಬ್ರವರಿ 2021 ರಂದು ಆರೋಪಿತನು ಹಣ ಪಡೆದಿದ್ದಾನೆ ಅಂತಾ ಬರೆದಿದ್ದೇನೆ ಅಂದರೆ ಸರಿ. ಆರೋಪಿತನಿಗೆ ಹಣ ಕೊಡುವಾಗ ನಾನು ನನ್ನ ಅಜ್ಜಿ ಹಾಜರಿದ್ದೇವು. ನಮ್ಮ ತಂದೆ ಮರಣ ಹೊಂದಿದ ಮೇಲೆ ನಾನು

ಮತ್ತು ನನ್ನ ಚಿಕ್ಕಪ್ಪ ಆರೋಪಿತನನ್ನು ಕರೆಯಿಸಿ ಕೇಳಿರುತ್ತಾರೆ. ಆರೋಪಿತನು ಚೆಕ್ಕ ಕೊಡುವಾಗ ನಾನು ನನ್ನ ಇಬ್ಬರು ಚಿಕ್ಕಪ್ಪರು, ಸಂಬಂಧಿಕರು ಮತ್ತು ನಮ್ಮ ವಕೀಲರು ಹಾಜರಿದ್ದರು. ನನ್ನ ದೂರಿನಲ್ಲಿ ಈ ಬಗ್ಗೆ ಬರೆಸಿಲ್ಲಾ ಅಂದರೆ ಸರಿ.

ನನ್ನ ತಂದೆಯವರು ದಾವಣಗೆರೆಯ ಎಸ ಎಸ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಂದೆ 10 ದಿನ ಆಸ್ಪತ್ರೆಯಲ್ಲಿ ಇದ್ದರು. ನಮ್ಮ ತಂದೆಗೆ ಆಸ್ಪತ್ರೆಯಲ್ಲಿ ಸುಮಾರು ಹಣ ಖರ್ಚು ಮಾಡಿದ್ದೇವೆ ಅಂದರೆ ಸರಿ. ಆರೋಪಿತರಿಗೆ 2 ಲಕ್ಷ 50 ಸಾವಿರಗಳನ್ನು ಮರಳಿ ಕೊಡಲು ಆಸ್ಪತ್ರೆಯಲ್ಲಿ ಕೇಳಿರುತ್ತೇವೆ ಅಂದರೆ ಸರಿ. ಆಗ ಆರೋಪಿತರು ನಮ್ಮ ತಂದೆಯ ಹತ್ತಿರ ಬಂದು ಆಸ್ಪತ್ರೆಯಲ್ಲಿ 2 ಲಕ್ಷ 50 ಸಾವಿರ ಮರಳಿಕೊಟ್ಟಿರುತ್ತಾರೆ ಅಂದರೆ ಸರಿಯಲ್ಲಾ. ಈ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ನಮ್ಮ ತಂದೆಗೆ ಕೊಡಬೇಕಾದ ಹಣ ಕೊಟ್ಟರೂ ಸಹ ಈ ಪ್ರಕರಣದ ಚೆಕ್ಕು ಮತ್ತು ಇತರ ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡು ದಾಖಲಿಸಿದ್ದೇವೆ ಅಂದರೆ ಸರಿಯಲ್ಲಾ. ನನ್ನ ಮತ್ತು ಆರೋಪಿತರ ನಡುವೆ ಯಾವುದೇ ವ್ಯವಹಾರ ಆಗಿಲ್ಲಾ ಅಂದರೆ ಸರಿ, ಆದರೆ ನಮ್ಮ ತಂದೆಯ ಜೊತೆಗೆ ಆಗಿರುತ್ತದೆ. ಅರೋಪಿತನು ನನ್ನ ಜೊತೆಗೆ ಎಂದಿಗೂ ವ್ಯವಾಹಾರ ಮಾಡಿಲ್ಲಾ ಅಂದರೆ ಸರಿ. ನಿಪಿ–01 ಆರೋಪಿತನಿಗೆ ಸಂಬಂಧಿಸಿಲ್ಲಾ ಅಂದರೆ ಸರಿಯಲ್ಲಾ. ನಿಪಿ–01 ರ ಮೇಲೆ ಆರೋಪಿತನ ಸಹಿ ಇರುವುದಿಲ್ಲಾ ಅಂದರೆ ಸರಿಯಲ್ಲಾ. ಆರೋಪಿತನ ಮೇಲೆ ಖೊಟ್ಟಿ ಹಣ ವಸೂಲಿಮಾಡಲು ಸುಳ್ಳು 4 ಪ್ರಕರಣಗಳನ್ನು ದಾಖಲಿಸಿದ್ದೇನೆ ಅಂದರೆ ಸರಿಯಲ್ಲಾ. ಆರೋಪಿತರಿಗೆ ಒಟ್ಟು 12 ಲಕ್ಷಗಳನ್ನು ನಮ್ಮ ತಾಯಿಯ ಮತ್ತು ಅಜ್ಜಿಯ ಪೆನ್ಶನ ಹಾಗೂ ಜಮೀನಿನಿಂದ ಬಂದ ಆದಾಯದಿಂದ ಕೊಟ್ಟಿರುತ್ತೇವೆ. ಆರೋಪಿತರಿಗೆ ಮೊದಲು 2 ಲಕ್ಷ 50 ಸಾವಿರ ಕೊಡುವಾಗ ಯಾವುದೇ ಕರಾರು ಪತ್ರ ಬರೆದುಕೊಂಡಿಲ್ಲಾ ಅಂದರೆ ಸರಿ. ಆ ದಿನ

ಯಾವುದೇ ಚೆಕ್ಕು ಪಡೆದುಕೊಂಡಿಲ್ಲಾ ಅಂದರೆ ಸರಿ. ಸಾಮಾನ್ಯವಾಗಿ 2 ಲಕ್ಷ 50 ಸಾವಿರ ಹಣ ಕೊಡುವಾಗ ಯಾವುದಾದರು ಭದ್ರತೆಗಾಗಿ ದಾಖಲೆ ಪಡೆಯುತ್ತಾರೆ ಅಂದರೆ ಸರಿ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸ ಅದೆ.

ಜೆಎಂಎಫ್‌ಸಿ, ಬ್ಯಾಡಗಿ.